ಎಂದು ಗಾಬರಿಯ ಧ್ವನಿಯಲ್ಲಿ ಲಕ್ಕಮ್ಮ ಹೇಳಿದಳು. ಅಷ್ಟೊತ್ತಿಗೆ ಅವಳ ಗಂಡ, 'ಇಲ್ಲೆಲ್ಲು ಕಾಮ್ತಿಲ್ಲ' ಎಂದ. 'ಯಾರಾದರು ಹೊತ್ಕೊಂಡು ಹೋಗಿರ್ಬೇಕು ಅಮ್ತೀನಿ' ಎಂದ ಪ್ರಸಾದ. 'ಇಲ್ಲ ಪ್ರಸಾದು, ಯಾರಾರ ಬಂದಿದ್ದರೆ ನನಗೆ ಎಚ್ಚರವಾಗ್ತಿರ್ಲಿಲ್ಲೆ, ಅಷ್ಟುಕ್ಕೂ ಒಂದು ಅರಚಿಕೊಳ್ಳೊ ಸದ್ದೇ ಅಗಿಲ್ಲ' ಎಂದಳು. 'ಮಾವ ಬರ್ರಿ, ಕೋಡಿಹಳ್ಳದ ಕಡೆಕೆ ಏನಾರ ಹೋಗಿರ್ಬೋದು, ನೋಡಿಕೆಂಡು ಬರಣ' ಅಂದ. ಅವರು ಆ ಕಡೆ ಹೋದರು. ಲಕ್ಕಮ್ಮ, 'ಚುಕ್ಕಿ ನೀನಿಲ್ಲೇ ಇರು, ಅದುನ್ನ ಬೇರೆ ಇಲ್ಲೇ ನೇತಾಕೆತೆ' ಎಂದಳು ನೇತಾಡುತ್ತಿರುವ ಹೋತದ ದೇಹವನ್ನು ನೋಡುತ್ತ. 'ನಾನು ಊರ್ನೊಳಗೆ ಹೋಗಿ ನೋಡಿಕೆಂಡು ಬತ್ತಿನಿ' ಎಂದು ಮತ್ತೊಂದು ದಿಕ್ಕನ್ನು ಹಿಡಿದು ಊರಿನ ಒಳಗಡೆ ಹೋದಳು.

ಈ ಮೂರು ಜನ ಒಂದು ಗಂಟೆ ಆದರೂ ಬರಲಿಲ್ಲ, ಎರಡು ಗಂಟೆ ಆದರೂ ಬರಲಿಲ್ಲ. ಚುಕ್ಕಿ ಹೊರಗಿನ ಚಾಪೆಮೇಲೆ ಕುಳಿತುಕೊಂಡು ಗೋಡೆಗೆ ಒರಗಿಕೊಂಡವಳು ನಿದ್ರೆಗೆ ಜಾರಿದಳು. ಮುಂಬಾಗಿಲು ಅರ್ಧ ತೆರೆದಿತ್ತು. 'ಚುಕ್ಕಿ ಚುಕ್ಕಿ' ಎನ್ನುವ ಸದ್ದು ಇವಳಿಗೆ ಕೇಳಿಸಿತು ಒಳಗಡೆಯಿಂದ. 'ನೀನು ಬರಲೇ ಇಲ್ಲ, ಎತ್ತುಗಳನ್ನ ನೋಡಕೆ. ಬತ್ತೀಯ ಅಮ್ತ ಕಾಯ್ತಿದ್ದೆ. ಮಾರಿ ಗುಡಿತಕು ಬರಲಿಲ್ಲ. ದೀಪದ ಬೆಳಕಲ್ಲಿ ಕಾಣಬೇಕು ಅಮ್ತ ಎಷ್ಟೊಂದು ಆಸೆ ಇತ್ತು'. 'ಈಗ ಬಂದಿದಿನಲ್ಲ'. 'ಚುಕ್ಕಿ, ಚುಕ್ಕಿ' ಎಂದು ಮತ್ತೆ ಸದ್ದು ಕೇಳಿತು. ಅವಳು ಎದ್ದು ಒಳ ಹೋದಳು. ಗವಾಕ್ಷಿಯ ಒಳಗಿಂದ ತಣ್ಣನೆಯ ಗಾಳಿ ಒಳಗಡೆ ಬರುತ್ತಿತ್ತು. ಇವಳದಲ್ಲದ ದೇಹ ಇವಳನ್ನು ಆವರಿಸಿಕೊಂಡು ಇವಳ ಮೈ, ನರ ನಾಡಿಗಳನ್ನೆಲ್ಲ ಕರಗಿಸಿತು. 'ಎಷ್ಟು ದಿನ ಆತು, ಈ ದೇಹದ ಪರಿಮಳ ಹೀರಿ. ನೇರಳೆ ಹಣ್ಣಿನ ವಾಸನೆ, ಅದರ ಸಿಹಿ, ಹುಳಿ, ಒಗರು. ಅದರ ಬಣ್ಣ. ಅದರ ಮರದ ನೆರಳು. ಎಲ್ಲಿಗೆ ಹೋಗಿದ್ದೆ ಇಷ್ಟು ದಿನ, ಎಲ್ಲಿದಿಯಾ?' ಚುಕ್ಕಿಯ ವಾಕ್ಯಗಳು ಇನ್ನು ಮುಂದಕ್ಕೆ ಹೋಗಲು ಅವಕಾಶ ಕೊಡದೆ ಅವಳ ತುಟಿಗಳನ್ನು ಇನ್ನೆರಡು ತುಟಿಗಳು ಕಚ್ಚಿ ಹೀರುತ್ತಿದ್ದವು. 'ಕ್ರಿಯೆಯಲ್ಲಿ ಮಾತೇಕೆ?' ಎಂದಿತು ಇವಳ ಅಪ್ಪಿಕೊಂಡಿದ್ದ ದೇಹ. ಮತ್ತಷ್ಟು ಬಿಗಿಯಾಗಿ ಒಂದರೊಳಗೊಂದು ಕರಗಿದವು ಎರಡು ದೇಹಗಳು. 'ನಾಳಿಕ್ಕೆ ಎಲ್ಲ ಪಾಲಿಗೆ ಬತ್ತಾರೆ ಏನಮ್ತ ಹೇಳ್ಳಪ್ಪ, ಅದಿನ್ನಾವ ಮಾಯ್ದಾಗೆ ಹೋತು, ಅದಿನ್ನ್ಯಾವ ಸೂಳೆಮಕ್ಕಳು ಹೊಡಕೊಂಡು ಹೋದ್ರೋ' ಎಂದು ಕೃಷ್ಣಪ್ಪ ಬೈಯ್ದುಕೊಳ್ಳುತ್ತ ಹತಾಶನಾಗಿ ಅಂಗಳದೊಳಗೆ ಬಂದ ಸದ್ದಾಯಿತು. 'ನನಗೂ ಎಲ್ಲೂ ಕಾಮ್ಲಿಲ್ಲ, ಎಲ್ಲ ಆ ಮಾತಾಯಿ ನೋಡ್ಕೆಮ್ತಳೆ ಬಿಡು' ಎಂದಳು ಲಕ್ಕಮ್ಮ. 'ಚುಕ್ಕಿ, ಚುಕ್ಕಿ' ಎಂದು ಪ್ರಸಾದ ಕೂಗಿದ. ಲಕ್ಕಮ್ಮ, 'ಈ ಪಿಳ್ಳೆ ಇದುನ್ನು ನೀಗ್ಲಿಕ್ತಿದ್ದಳು, ಇಲ್ಲೆ ಇರು ಅಂದ್ರೆ ಆಲೆ ಒಳಕೋಗಿ ಮಕ್ಕಂಡಿದಾಳೆ' ಎಂದು ಬೈಯತೊಡಗಿದಳು. 'ಅವರು ಬಂದರು' ಅಂದಳು ಚುಕ್ಕಿ. ಅಷ್ಟೊತ್ತಿಗೆ ಅವಳ ದೇಹ ಸ್ವತಂತ್ರವಾಗಿತ್ತು. ಅವಳನ್ನು ಅಪ್ಪಿದ್ದ ದೇಹ ಕತ್ತಲಲ್ಲಿ ಕರಗಿತ್ತು. ಹೊಸ್ತಿಲನ್ನು ದಾಟಿಕೊಂಡು ಬಂದ ಪ್ರಸಾದ, 'ಮಾಳಿಗೆ ಮೇಲೆ ಯಾರೋ ಓಡಿ ಹೋಗುವ ಸದ್ದಾಗ್ಯೆತೆ' ಎಂದ. 'ನವಿಲು' ಎಂದಳು. ಲಕ್ಕಮ್ಮ, 'ನಿನಗೆ ನಿಟ್ಟುಗಿಟ್ಟು ಐತ, ಯಂಗೆ, ಇನ್ನು ಸ್ವಪ್ನದಲ್ಲೇ ಇದಿಯಲ್ಲೇ ನಾವು ಬಂದು ಎಷ್ಟೊತ್ತು' ಆಯ್ತು ಎಂದಳು.

**ಎಚ್.ಆರ್. ರಮೇಶ್**

ಕವಿ, ಕತೆಗಾರ ಎಚ್.ಆರ್. ರಮೇಶ್ ಮೂಲತಃ ಚಿತ್ರದುರ್ಗದ ಬಳಿಯ ಹರಿಯಬ್ಬೆ ಊರಿನವರು. ಪ್ರಸ್ತುತ ಮಡಿಕೇರಿಯಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದಾರೆ. ಸಮಕಾಲೀನ ಲೇಖಕರ ಕೃತಿಗಳ ಕುರಿತು ವಿಮರ್ಶೆಗಳನ್ನು ಬರೆದಿದ್ದಾರೆ. ಪ್ರಕಟಿತ ಕವನ ಸಂಕಲನಗಳು: 'ಝುನ್ನದಿ', 'ಅದರ ನಂತರ'.